ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

OS ನಂಬರ. 83/2023

ಪಿ ಡಬ್ಲ್ಯೂ-2

ದಿಃ 15-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ವೆಂಕಟ್ರಮಣ ಗೌಡ

ತಂದೆಯ ಹೆಸರುಃ ಲಿಂಗು ಗೌಡ

ವಯಸ್ಸುಃ 60 ವರ್ಷ

ಉದ್ಯೋಗಃ ರೈತಾಬಿ

ವಿಳಾಸಃ ಕುಂಟಕಣಿ ಗ್ರಾಮ, ಅಸುವಳ್ಳಿ

ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಾದ ಶ್ರೀ ಆರ್.ಎನ್.ಹೆಚ್ ಇವರಿಂದಃ

ಗಣಪಿ ದೇವು ಗೌಡ ಇವರ ಪರಿಚಯವಿರುತ್ತದೆ. ದಿಃ28-10-2017 ರಲ್ಲಿ ಕಾರವಾರದಲ್ಲಿ ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ವಾದಿಯ ಪರವಾಗಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟು ಮೃತ್ಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ಗಣಪಿ ದೇವು ಗೌಡ, ನಾನು ಮತ್ತು ಸುಧಾಕರ ಎಂಬುವವರು ಹೋಗಿದ್ದೇವು. ಗಣಪಿ ದೇವು ಗೌಡ ಇವರು ಮರಣಪಡುವ ಪೂರ್ವದಲ್ಲಿ ವಾದಿಯ ಮನೆಯಲ್ಲಿ ಇದ್ದರು, ನನಗೆ ವಾದಿಯ ಪರಿಚಯವಿರುತ್ತದೆ. ಅವರು ಗಣಪಿ ದೇವು ಗೌಡ ಇವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆದ ಕಾರಣ ಗಣಪಿ ದೇವು ಗೌಡ ನನಗೆ ವಾದಿಯು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು, ಈಗ ನನಗೆ ವಯಸ್ಸಾಗಿದ್ದರಿಂದ ಆಸ್ತಿಯನ್ನು ವಾದಿಯ

ಪರವಾಗಿ ಮೃತ್ಯು ಪತ್ರ ಮಾಡಲು ಇಚ್ಛಿಸುತ್ತೇನೆ ಎಂದು ಹೇಳಿ ನನ್ನನ್ನು ನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿರುತ್ತಾರೆ. ದಾವಾ ಆಸ್ತಿಗಳು ಗಣಪಿ ಗಂಡ ತೀರಿಕೊಂಡ ನಂತರ ಗಣಪಿ ಹೆಸರಿಗೆ ಆಗಿರುತ್ತವೆ. ಆಸ್ತಿಗಳ ಸರ್ವೆ ನಂ.1/1, 2/2, 2/3 ಮತ್ತು 2/4 ಆಗಿರುತ್ತವೆ. ಸದರಿ ಆಸ್ತಿಗಳು ನ್ಯಾಯಾಲಯದ ಮುಖಾಂತರ ಆಕೆಗೆ ಬಂದಿರುತ್ತವೆ ಎಂದು ನನಗೆ ಗೊತ್ತಿರುತ್ತದೆ. ವಾದಿಯು ಗಣಪಿ ದೇವು ಗೌಡ ಇವರಿಗೆ ಏನು ಆಗಬೇಕು ಎಂದರೆ ಸಾಕ್ಷಿಯು ಆಕೆಯ ಗಂಡನ ಅಣ್ಣನ ಮಗ ಎಂದು ನುಡಿಯುತ್ತಾರೆ. ನಾನು ನೊಂದಣಿ ಕಚೇರಿಯಲ್ಲಿ ಮೃತ್ಯು ಪತ್ರಕ್ಕೆ ಸಹಿ ಮಾಡಿರುವುದನ್ನು ಗುರುತಿಸುತ್ತೇನೆ. ಸಾಕ್ಷಿಯು ನಿಪಿ–5 ಮೃತ್ಯು ಪತ್ರದ ಮೇಲಿರು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–5ಎ ಎಂದು ಗುರುತಿಸಲಾಯಿತು. ಗಣಪಿ ದೇವು ಗೌಡ ಇವರು ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ. ಅದನ್ನು ನೊಂದಣಿ ಕಚೇರಿಯಲ್ಲಿ ಅಧಿಕಾರಿಗಳ ಮತ್ತು ನಮ್ಮ ಮುಂದೆ ಹಾಕಿರುತ್ತಾರೆ. ಸಾಕ್ಷಿಯು ಇನ್ನೊಬ್ಬ ಸಾಕ್ಷಿದಾರರ ಸಹಿಯನ್ನು ನೋಡಿ ಗುರುತಿಸುತ್ತಾರೆ. ಮೃತ್ಯು ಪತ್ರದಲ್ಲಿ ಬರೆದ ವಿಷಯಗಳು ನಾನು ಓದಿದ್ದು, ನನಗೆ ಗೊತ್ತಿರುತ್ತದೆ. ದಾವಾ ಆಸ್ತಿಗಳು ಈಗ ವಾದಿಯ ತಾಬಾದಲ್ಲಿ ಇರುತ್ತವೆ.

ಪ್ರತಿವಾದಿಯ ಪರ ವಕೀಲರು ಗೈರು ಹಾಜರು ಇದ್ದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.